ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 2, Sep-Oct 2022, Pp. 50-53.
©*IIMRD*, Mysuru
IIMRD JOURNALS
www.iimrd.com

# ಖಾದಿ ಪ್ರಿಯ ಗಾಂಧಿ

**ದೇವಿಕಾ ರಮೇಶ ಧಟ್ಟಿ* ಮತ್ತು ಡಾ. ಎಸ್. ಎಂ. ಹಿರೇಮಠ****
*ಸಂಶೋಧನಾ ವಿದ್ಯಾರ್ಥಿ, ಡಾ. ಎಸ್. ಎಂ. ಹಿರೇಮಠ, ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
**ಮಾರ್ಗದರ್ಶಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***ಸಾರಾಂಶ:* (Abstract)**

*ಭಾರತ ಗ್ರಾಮಗಳ ದೇಶ. ಗ್ರಾಮಗಳಲ್ಲಿನ ಸಮಸ್ಯೆಗಳನ್ನು ನೋಡಿ ಗಾಂಧೀಜಿ ಗ್ರಾಮಗಳ ಪುನರುಜ್ಜೀವನಕ್ಕಾಗಿ, ನಿರುದ್ಯೋಗ ನಿವಾರಣೆಗಾಗಿ, ಬಿಡುವಿನ ವೇಳೆಯ ಉಪಯೋಗಕ್ಕಾಗಿ, ಆರ್ಥಿಕ ಸಮತೆಗಾಗಿ, ದೈಹಿಕ ಶ್ರಮದ ಮಹತ್ವಕ್ಕಾಗಿ, ಜನರು ಸ್ವಾವಲಂಬನೆಯಾಗಿರಬೇಕೆಂದು ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿದರು. ಸ್ವದೇಶಿ ವಸ್ತುಗಳ ಬಳಕೆ, ವಿದೇಶಿ ವಸ್ತುಗಳ ಬಹಿಷ್ಕಾರ ಮಾಡಬೇಕೆಂದು ಸ್ವದೇಶಿ ಆಂದೋಲನಕ್ಕೆ ಆಮಂತ್ರಿಸಿದರು. ಇದು ಸ್ವರಾಜ್ಯ ಸ್ಥಾಪಿಸಲು ಅನುಮೋದನೆಯಾಯಿತು. ಈ ಹಿನ್ನಲೆಯಲ್ಲಿ ಗ್ರಾಮೀಣಾಭಿವೃದ್ಧಿಯಲ್ಲಿ ಗಾಂಧೀಜಿಯವರ ಚಿಂತನೆಗಳನ್ನು ವಿವರಿಸಲಾಗಿದೆ.*

***ಮುಖ್ಯಪದಗಳು* (Keywords):** *ಗ್ರಾಮೀಣಾಭಿವೃದ್ಧಿ, ಮಹಾತ್ಮ ಗಾಂಧೀಜಿ, ಖಾದಿ, ಗ್ರಾಮೋದ್ಯೋಗ.*

## ಪೀಠಿಕೆ

ಹನ್ನೆರೆಡನೇ ಶತಮಾನದ ನಮ್ಮ ವಚನಕಾರರು ಪ್ರಾಮುಖ್ಯತೆ ಕೊಟ್ಟಿರುವ ಮತ್ತು ಅದನ್ನು ಕ್ರಿಯಾತ್ಮಕವಾಗಿ ಅಳವಡಿಸಿದ "ಕಾಯಕವೇ ಕೈಲಾಸ" ಎಂಬ ದೈಹಿಕ ಶ್ರಮ ದುಡಿಮೆಯ ವಿಚಾರ ಮಹಾತ್ಮ ಗಾಂಧೀಜಿಯಲ್ಲಿಯೂ ನೋಡುತ್ತೇವೆ. ಅದು "ವಂಶವೃತ್ತಿ ಗೌರವ"ವೇ ಎಂಬುದಾಗಿದೆ. ಗಾಂಧೀಜಿಯ ಮೇಲೆ ಭಾರತದ ಬಡತನದ ಪ್ರಭಾವ ಬಹಳಷ್ಟಾಯಿತು. ಬಡವರ ಅನುಭವವನ್ನು ಬಡವನಾದಾಗಲೇ ಅನುಭವಿಸಲು ಸಾಧ್ಯವೆಂದು ಮುಂದಿನ ಜೀವನವನ್ನು ಬಡತನದಲ್ಲಿಯೇ ಸಾಗಿಸಿದರು. ಭಾರತದ ಕೋಟಿಗಟ್ಟಲೆ ಜನರು ಮೈತುಂಬ ಬಟ್ಟೆಗಳಿಲ್ಲದೆ ತಿರುಗುವುದನ್ನು ನೋಡಿ ಅವರೂ ಸಹ ಒಂದು ತುಂಡು ಪಂಚೆಯನ್ನಷ್ಟೆ ಧರಿಸಿದರು. ಈಸ್ಟ್ ಇಂಡಿಯಾ ಕಂಪನಿಯ ಕಾಲದಲ್ಲಿ ಭಾರತದ ವಿದೇಶಿ ವ್ಯವಹಾರವು ಇಲ್ಲಿಯ ಜನರ ಕೈಬಿಟ್ಟಿತು. ಉದ್ಯೋಗಿಗಳು ಕೈಬಿಟ್ಟರು. ಭಾರತದಂತಹ ದೊಡ್ಡ ದೇಶವು ತನ್ನ ಬಟ್ಟೆಗಾಗಿ ಇಂಗ್ಲೆಂಡ್‌ನ ಮುಖ ನೋಡಬೇಕಾಯಿತು. ಇದನ್ನೆಲ್ಲಾ ಸೂಕ್ಷ್ಮವಾಗಿ ವಿಚಾರಿಸಿದ ಗಾಂಧೀಜಿ ಚರಕ ಮತ್ತು ಅದರಿಂದ ತಯಾರಿಸಿದ ಖಾದಿ ಬಟ್ಟೆಗಳ ವಿಶೇಷ ಮಹತ್ವ ಕೊಟ್ಟರು. ಚರಕವನ್ನು ಬಹುವಿಧವಾಗಿ ಮೆಚ್ಚಿಕೊಂಡ ಗಾಂಧೀಜಿ ಪ್ರತಿಯೊಬ್ಬರ ಮನೆಯಲ್ಲೂ ಚರಕವಿರಬೇಕೆಂದು ತಿಳಿಸಿದರು.

***Please cite this article as:*** ದೇವಿಕಾ ರಮೇಶ ಧಟ್ಟಿ ಮತ್ತು ಡಾ.ಎಸ್.ಎಂ.ಹಿರೇಮಠ. (2022). ಖಾದಿ ಪ್ರಿಯ ಗಾಂಧಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(2). ಪು.ಸಂ. 50–53.*

ಚರಕವು ಸ್ವದೇಶಿ ವೃತ್ತಿಯ ಸಂಕೇತ. ರಾಷ್ಟ್ರೀಯತೆಯ ಸಂಕೇತವೂ ಆಗಿದೆ. ಮತಧರ್ಮದ ಬೇಧಭಾವವಿಲ್ಲದೇ ಜ್ಯಾತ್ಯಾತೀತತೆಯ ಕನ್ನಡಿಯಾಗಿ ಬಡಜನರಿಗೆ ಉದ್ಯೋಗವಕಾಶ ದೊರೆಕಿ ಜೀವನೋಪಾಯದ ಮೂಲಮಂತ್ರ ಚರಕವಾಯಿತು. ಒಂದು ಬ್ರಹ್ಮಾಸ್ತ್ರವಾಗಿ ಇದನ್ನು ಬಳಸಬೇಕೆಂದು ಗಾಂಧೀಜಿ ಹೀಗೆ ಹೇಳುತ್ತಾರೆ. "ಭಾರತದಲ್ಲಿ ಬೆಳೆಯುತ್ತಿರುವ ದಾರಿದ್ರ್ಯಕ್ಕೆ ರಾಟೆ (ಚರಕ) ಮತ್ತು ಕೈಮಗ್ಗವೇ ಬ್ರಹ್ಮಾಸ್ತ್ರ. ಯಾವುದು ಭಾರತದ ದಾರಿದ್ರ್ಯವನ್ನು ಹೋಗಲಾಡಿಸುವುದೋ, ಅದೇ ಸ್ವರಾಜ್ಯವನ್ನೂ ಸ್ಥಾಪಿಸುವುದು". ಭಾರತದ ಆರ್ಥಿಕವಾದ ಬಲಹೀನತೆಯನ್ನು ಚರಕ ಬಳಸುವ ಮೂಲಕ ಖಾದಿ ಉಪಯೋಗಿಸುವ ಮೂಲಕ ದೇಶವನ್ನು ಬಲಸಹಿತಗೊಳಿಸುವ ಶ್ರಮ ಗಾಂಧೀಜಿಯದ್ದಾಗಿತ್ತು.

ಅದಕ್ಕಾಗಿ ಗಾಂಧೀಜಿ ಸಾಬರಮತಿ ಸತ್ಯಾಗ್ರಹಾಶ್ರಮ ಸ್ಥಾಪನೆಯಾದ ಮೇಲೆ ಅಲ್ಲಿ ಕೆಲವು ಕೈಮಗ್ಗಗಳನ್ನು ಹೂಡಿಸಿದರು. ಆದರೆ ಅಲ್ಲಿ ಯಾರಿಗೂ ಕೈಗಾರಿಕ ಕುಶಲತೆಯ ಜ್ಞಾನವಿರಲಿಲ್ಲ. ಒಬ್ಬ ನಿಪುಣ ಕೈಮಗ್ಗ ಶಿಕ್ಷಕನನ್ನು ನೇಮಕ ಮಾಡಲಾಯಿತು. ಆದರೆ ಆತ ಸಂಪೂರ್ಣವಾಗಿ ತನ್ನ ವಿದ್ಯೆಯನ್ನು ಹೇಳಿಕೊಡಲಿಲ್ಲ. ಅದರಲ್ಲಿ ಅಭಿರುಚಿ ಇರುವ ಮಗನ್‌ಲಾಲ್‌ಗಾಂಧಿ ಬಹಳ ಬೇಗ ಆ ಕಲೆಯಲ್ಲಿ ಪ್ರಾವೀಣ್ಯತೆ ಹೊಂದಿ ಆಶ್ರಮದ ಅನೇಕರಿಗೆ ತರಬೇತು ನೀಡಿ ನೇಕಾರರಾಗಿ ಮಾಡಲಾಯಿತು. ಇದರಿಂದ ಅವರು ಮುಂದೆ ಕೈಯಿಂದ ಸಿದ್ಧವಾದ ಬಟ್ಟೆಗಳನ್ನು ಮಾತ್ರ ತಾವು ಧರಿಸಬೇಕೆಂಬ ಗುರಿಯಿಟ್ಟುಕೊಂಡರು. ಮಿಲ್ ಬಟ್ಟೆಗಳನ್ನು ಬಿಟ್ಟು ಕೇವಲ ಭಾರತದ ಗಿರಣಿಗಳ ನೂಲಿನಿಂದ ತಯಾರಾದ ಕೈಮಗ್ಗ ಬಟ್ಟೆಗಳನ್ನು ಧರಿಸುವ ನಿರ್ಣಯ ಆಶ್ರಮವಾಸಿಗಳು ಕೈಗೊಂಡರು. ಅದರಿಂದ ಆಶ್ರಮದಲ್ಲಿ ಚರಕಕ್ಕೆ ಪ್ರಮುಖ ಸ್ಥಾನ ದೊರೆಯಿತು. ಮಗನ್‌ಲಾಲ್‌ಗಾಂಧಿ ತಮ್ಮ ಯಂತ್ರ ನಿರ್ಮಾಣ ಕೌಶಲ್ಯ ಬುದ್ದಿಯಿಂದ ಅನೇಕ ಸುಧಾರಿತ ಚರಕಗಳನ್ನು ಸಿದ್ಧಗೊಳಿಸಿದರು. ಆಶ್ರಮದಲ್ಲಿ ಮೊದಲು ತಯಾರಿಸಿದ ಒಂದು ಗಜ ಖಾದಿಗೆ 17 ರೂಪಾಯಿ ಬೆಲೆ ಬಂದಿತು. ಖಾದಿ ಚಳುವಳಿ ಇಲ್ಲಿಂದಲೆ ಆರಂಭವಾಯಿತು.

ಗಾಂಧೀಜಿಯು ಕೂಡ ಚರಕದಿಂದ ನೂಲುವುದನ್ನು ಕಲಿತರು. ತಾವು ಉಡುವ ಬಟ್ಟೆಯೆಲ್ಲಾ ಖಾದಿಯೇ ಆಗಿರಬೇಕೆಂದು ಇಚ್ಛಿಸಿದರು. "ಅಖಿಲ ಭಾರತ ನೂಲುವವರ ಸಂಘ" ಸ್ಥಾಪಿಸಿ ಚರಕವನ್ನು ಪುನರುಜ್ಜೀವನಗೊಳಿಸಿದರು. ಈ ಸಂಘ ಅನೇಕ ಪ್ರಾಂತ್ಯಗಳಲ್ಲಿ ಅನೇಕ ಶಾಖೆಗಳಾಗಿ ನಿರ್ಮಾಣ ಹೊಂದಿತು. ಗಾಂಧೀಜಿಯ ಪರಿಶ್ರಮದಿಂದ ಒಂದು ವರ್ಷದಲ್ಲಿಯೇ ಸುಮಾರು 150 ಖಾದಿ ಉತ್ಪಾದನಾ ಕೇಂದ್ರಗಳಾದವು. ಸುಮಾರು 45 ಸಾವಿರ ನೂಲುವವರು ಮತ್ತು ನೇಯುವರು ಇದ್ದರು. 1935ರಲ್ಲಿ ಈ ಸಂಘದ ಮೂಲಕ ಎರಡು ಕೋಟಿ ರೂಪಾಯಿಗಳಷ್ಟು ಮಜೂರಿಯನ್ನು ಕೆಲಸಗಾರರಿಗೆ ವಿತರಿಸಲಾಯಿತು. ಇದರಿಂದ ಗ್ರಾಮಗಳಲ್ಲಿನ ನಿರುದ್ಯೋಗ ಮತ್ತು ಅವಶ್ಯಕತೆಗಳು ಪೂರೈಕೆಗೊಂಡು ಗ್ರಾಮಗಳು ಅಭಿವೃಧಿ ಹೊಂದುವಂತಾಯಿತು. ಖಾದಿಯ ಪ್ರಗತಿ ಕಂಡು ಜವಾಹರಲಾಲ್ ನೆಹರೂ ಅವರು ಖಾದಿಯನ್ನು "ಭಾರತದ ಸ್ವಾತಂತ್ರ್ಯದ ವಿಶಿಷ್ಟ ಪೋಷಾಕು" ಎಂದು ಕರೆದರು. ಅದರಂತೆ ಸ್ವಾತಂತ್ರ ಸಂಗ್ರಾಮಿಗಳು ಬಿಳಿ ಖಾದಿ ಉಡುಪುಗಳನ್ನು ಹಾಕಿಕೊಳ್ಳಲು ಆರಂಭಿಸಿದರು. ಈಗಲೂ ರಾಜಕಾರಣಿಗಳು ಅದೇ ಪಾಲಿಸಿಕೊಂಡು ಬಂದಿದ್ದಾರೆ.

ಸ್ವದೇಶಿ ತತ್ವದ ಪಾಲಕರಾದ ಗಾಂಧೀಜಿ ಹಲವು ಬಾರಿ ತಾವು ಒಬ್ಬ ನೇಕಾರ ಮತ್ತು ರೈತ ಎಂದು ಹೇಳಿಕೊಳ್ಳತ್ತಿದ್ದರು. ನೇಯುವುದೆಂದರೆ ಅವರು ಉಸಿರು ತೆಗೆದುಕೊಳ್ಳುವಷ್ಟೆ ಸಲೀಸಾಗಿತ್ತು. ಅದು ಒಂದು

ಧಾರ್ಮಿಕ ಕರ್ಮದಂತೆ ದಿನನಿತ್ಯ ನಿರ್ವಹಿಸುತ್ತಿದ್ದರು. ಅವರು ಹಡಗಿನಲ್ಲಿ ಅಥವಾ ರೈಲಿನಲ್ಲಿ ಪ್ರಯಾಣಿಸುವಾಗಲು ನೂಲುವಿಕೆಯನ್ನು ಕೈಗೊಳ್ಳುತ್ತಿದ್ದರು. ಬಡವರು ತಮ್ಮದೇ ನೂಲಿನಿಂದ ತಯಾರಿಸಿದ ಖಾದಿಯನ್ನು ಬಳಕೆ ಮಾಡುವ ಮೂಲಕ ಸ್ವಸಂಪೂರ್ಣರಾಗಬೇಕು ಮತ್ತು ಸಿರಿವಂತರು ಒಂದು ವಿಧಿಯಂತೆ ನೂಲು ತೆಗೆದು ಬಡವರಿಗೆ ದಾನ ಮಾಡಬೇಕು. ಒಂದು ಕೋಟಿ ಜನ ದಿನಕೊಂದಕ್ಕೆ ಒಂದು ಗಂಟೆ ನೂಲು ತೆಗೆದರೆ, ರಾಷ್ಟ್ರೀಯ ಸಂಪತ್ತಿಗೆ ನಾವು ಪ್ರತಿದಿನ 50 ಸಾವಿರ ರೂಪಾಯಿಗಳನ್ನು ಸೇರಿಸಬಹುದು. ಈ ಕಾರ್ಯ ಎಲ್ಲರು ಮಾಡಬೇಕೆಂದು ಗಾಂಧೀಜಿ ಬಯಸಿದರು. ಈ ವಿಚಾರವನ್ನು ಹುಲಕುಂದ ಭೀಮಕವಿ ಅವರು "ಪವಿತ್ರ ಖಾದಿ" ಎಂಬ ಕಾವ್ಯದಲ್ಲಿ ಹೀಗೆ ಚಿತ್ರಿಸಿದ್ದಾರೆ.

*"ರಾಟಿಮೇಟಿ ಉದ್ಯೋಗ ನೀವು ರಾತ್ರಿ ಹಗಲಿ ನಡೆಸಿದರ*
*ಖಾತ್ರಿಯಿಂದ ಹೋಗತದ ಬಡತನ।*
*ಕಂಬಾರ ಬಡಿಗೇರ ಪಿಂಜಾರ ನೇಕಾರ ತಟಗಾರ*
*ಬಣಗಾರ ಉಪಜೀವನಾ । ಸಾಗತತಿ ದಿನಾ॥*

*ಖಾದಿಕೇಂದ್ರ ಗ್ರಾಮೋದ್ಯೋಗ ಚರಖಾಸಂಘ ಮೊದಲ ಮಾಡಿ ಎಷ್ಟೋ*
*ಸಂಘ ಮಾಡಿದಾರ ಸ್ಥಾಪನಾ । ಪೊಡವಿಯೊಳಗ ಕೂಲಿಕಾರ ಧೃಡದಿಂದ*
*ಇದರೊಳಗ ದುಡದರ ಪ್ರತಿದಿನಾ । ಸಿಗತತಿ ಹಣಾ॥*

*ಹನ್ನೊಂದು ಸಾವಿರದಾ ಐದನೂರು ಎಂಭತ್ತೊಂದ ಮಂದಿ ನೇಕಾರಜನಾ।*
*ಒಂದು ಲಕ್ಷನಾಲ್ವತ್ತೊಂಭತ್ತ ಸಾವಿರದಾ ಒಂದನೂರು ಇಪ್ಪತ್ತೊಂಭತ್ತು*
*ಜನಾ। ನೂಲುತಾರ ದಿನಾ । ಹತ್ತುಲಕ್ಷ ಹತ್ತುಸಾವಿರದಾವಂಬಯ್ಯನೂರು*
*ತೊಂಭತ್ತೇಳ। ವರ್ಷ ಉಳಸತಾರ ಇಷ್ಟು ಹಣಾ । ಕೋಟಿ ಮಂದಿ*
*ನೂಲುವರು ತೊಂಭತ್ತ ಲಕ್ಷ ನೆಯ್ಯುವರು ಬಿಟ್ಟು ಬಿಡದೆ ದುಡದರ*
*ಎಷ್ಟೋ ಹಣ । ಉಳುತತಿ ದಿನಾ॥*

*ಕಷ್ಟಪಟ್ಟ ನಿತ್ಯ ದುಡಿಬೇಕ । ಕೈ ಕೆಲಸ ಬೆಳಸುದಕ॥ ನೂಲ ತೆಗಿಬೇಕ*
*ಖಾದಿ । ನೇದ ದಿನಾ ಚರಖಾ ಸಂಘಕ್ಕೆ ಓಟಕೊಡಬೇಕ ನೇಕಾರ ಜನಾ।"*

ನಿರುದ್ಯೋಗ ಸಮಸ್ಯೆಯಿಂದ ಸರಳ ಜೀವನ ನಡೆಸಲು ಕಷ್ಟವಾಗುತ್ತಿರುವರಿಗೆ ಹಾಗೂ ಬಡತನದಿಂದ ಬಳಲುತ್ತಿರುವರಿಗೆ ಕವಿ ನಿವೇಧನೆಯನ್ನು ಮಾಡುವಂತೆ ಕಾವ್ಯದ ಸಾಲುಗಳು ಸಾರುತ್ತವೆ. ಉಪಜೀವನಕ್ಕಾಗಿ ಹಗಲು ರಾತ್ರಿ ರಾಟಿ ತಿರುಗಿಸಿ. ಅದರಿಂದ ತಮ್ಮ ದಿನನಿತ್ಯದ ಜೀವನ ಸಾಗುತ್ತದೆ. ನಮ್ಮ ಅನುಕೂಲಕ್ಕಾಗಿ ಅನೇಕ ಸಂಘ–ಸಂಸ್ಥೆಗಳು ತೆರೆದಿವೆ ಎಂದು ಕವಿ ಅವುಗಳ ಹೆಸರುಗಳನ್ನು ಸಹ ಕಾವ್ಯದಲ್ಲಿ ಉಲ್ಲೇಖಿಸಿದ್ದಾರೆ. ಅವುಗಳೆಂದರೆ ಖಾದಿಕೇಂದ್ರ, ಗ್ರಾಮೋದ್ಯೋಗ ಸಂಘ, ಚರಖಾ ಸಂಘ ಇತ್ಯಾದಿ. ಈ ಸಂಘಗಳಿಗೆ ಸೇರಿ ನಿಷ್ಠೆಯಿಂದ ದುಡಿದರೆ ಹಣ ಸಿಗುವುದು ಖಂಡಿತ. ಅನೇಕ ಜನ ಇದರ ಸದುಪಯೋಗ

ಮಾಡಿಕೊಂಡಿದ್ದಾರೆ. 11,581 ಜನ ನೇಕಾರರು, 1,49,129 ಜನ ನೂಲುವರು ಈ ಕಾರ್ಯದಲ್ಲಿ ತೊಡಗಿದ್ದಾರೆ. ಅಂತಹ ಕೋಟಿ ಜನ ನೂಲುವುದನ್ನು ಲಕ್ಷಾಂತರ ಜನ ನೇಯುವುದನ್ನು ಪ್ರತಿ ನಿತ್ಯ ಮಾಡಿದರೆ ಅತಿ ಹೆಚ್ಚು ಹಣ ಉಳಿಸುವುದಕ್ಕೆ ಸಾಧ್ಯವಾಗುತ್ತದೆ. ಭಾರತ ಆರೋಗ್ಯಪೂರ್ಣ ಬೆಳೆಯಲು ಸಾಧ್ಯವಾಗುತ್ತದೆ. ದುಡಿತವೇ ಜೀವನವಾಗಿ ಖಾದಿಯನ್ನು ಮೇರು ಕೆಲಸವಾಗಿ ಬೆಳೆಸಬೇಕು ಬೆಳೆಯಬೇಕು ಎಂದು ಕವಿ ಜನರಲ್ಲಿ ಹುರುಪನ್ನು ಮೂಡಿಸುತ್ತಿದ್ದಾರೆ. ಕಾವ್ಯವನ್ನು ಓದಿದಾಗ ಕವಿ ಗಾಂಧೀಜಿಯ ಸಮಕಾಲೀನವರಾಗಿದ್ದರೆಂದು ಕಂಡು ಬರುತ್ತದೆ. ಅದರೊಂದಿಗೆ ಅವರು ಸಂಪೂರ್ಣವಾಗಿ ಗಾಂಧೀಜಿಯ ಅಭಿಮಾನಿಯೂ ಕೂಡ. ಅದಕ್ಕೆ ಅವರು ಕಾವ್ಯದ ಮೂಲಕ ಖಾದಿ ಪ್ರಚಾರ ಹಾಗೂ ಖಾದಿ ಸಂಘಗಳಿಗೆ ಬೆಂಬಲ ನೀಡಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. ನೇಕಾರರು ಎಷ್ಟು ಜನ, ನೂಲುವರು ಎಷ್ಟು ಜನ, ಉಳಿಯುವ ಹಣವೆಷ್ಟು ಎಂಬುದನ್ನು ಅಂಕಿಅಂಶಳ ಮೂಲಕ ಲೆಕ್ಕಚಾರ ಹಾಕಿದಂತೆ ಕಾಣುತ್ತದೆ. ಒಟ್ಟಾರೆ ಈ ಕಾವ್ಯ ಆ ಕಾಲದ ಸಿಂಹಾವಲೋಕನದಂತೆ ಪ್ರತಿಬಿಂಬಿತವಾಗಿದೆ.

ಖಾದಿಯ ಉತ್ಪಾದನೆಯಲ್ಲಿ ಹತ್ತಿಯನ್ನು ಬೆಳೆಯುವುದು, ಬೀಜಗಳನ್ನು ಕೀಳುವುದು, ಹತ್ತಿಯಿಂದ ಬೀಜ ಬೇರ್ಪಡಿಸುವುದು, ಸ್ವಚ್ಛಗೊಳಿಸುವುದು, ಹಿಂಜುವುದು, ಹಂಜಿ ಮಾಡುವುದು, ನೂಲುವುದು, ನೇಯುವುದು, ಬೇರೆ ಬೇರೆ ಗಾತ್ರಗಳಲ್ಲಿ ವಿಂಗಡಿಸುವುದು, ಬಣ್ಣಗಳನ್ನು ಹಾಕುವುದು, ಅಡ್ಡ ಎಳೆಗಳನ್ನು ಮತ್ತು ಹೊಕ್ಕುನೂಲುಗಳನ್ನು ಸಿದ್ಧಪಡಿಸುವುದು, ನೇಯದ ಬಟ್ಟೆಗಳನ್ನು ಒಗೆಯುವುದು ಹೀಗೆ ಅನೇಕ ಕಾರ್ಯಗಳಿಗೆ ಅನೇಕ ಜನರು ಬೇಕಾಗುತ್ತದೆ. ಖಾದಿಯಿಂದ ಉದ್ಯೋಗವಕಾಶಗಳು ಹೆಚ್ಚುತ್ತವೆ. ಇದನ್ನು ಬೃಹತ ರಾಷ್ಟ್ರೀಯ ಚಟುವಟಿಕೆಯಾಗಿ ಮಾಡಬಹುದೆಂದು ಗಾಂಧೀಜಿ ಹೇಳುತ್ತಾರೆ. ಅವರ ಸಲಹೆಯಂತೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಭಾರತದಾದ್ಯಂತ ಹಳ್ಳಿಗಳಿಗೆ ಹೋಗಿ ಪ್ರತಿಯೊಂದು ಕಾರ್ಯವಿಧಾನವನ್ನು ತಿಳಿಸುವ ಪ್ರಯತ್ನ ಮಾಡಿದೆ. ಬಹುತೇಕ ಮಟ್ಟಿಗೆ ಈ ಕಾರ್ಯವು ಆ ಸಮಯಕ್ಕೆ ನಿರ್ವಹಣೆಗೊಂಡಿದೆ.

ಹೀಗೆ "ಖಾದಿ" ಚಳುವಳಿಯನ್ನು ಪ್ರೇರೆಪಿಸುವ ಮಾನದಂಡವಾಯಿತು. ಖಾದಿ ಗಾಂಧೀಜಿಯ ಪ್ರಿಯಕ್ಕೆ ಪಾತ್ರಗೊಂಡಿತು. ಖಾದಿ ಪ್ರಿಯ ಗಾಂಧೀಜಿ ಖಾದಿಯನ್ನೇ ಪ್ರಿಯಗೊಳಿಸಿದರು.

**ಪರಾಮರ್ಶನ ಗ್ರಂಥಗಳು**


- ಗಾಂಧಿ ಎಂ.ಕೆ. (ಮೂ.), ಕೃಷ್ಣಮೂರ್ತಿ. ಜಿ. ಎಂ. (ಅನು.) (2019). ನನ್ನ ಕನಸಿನ ಭಾರತ. ಸಪ್ನ ಬುಕ್ ಹೌಸ್. ಬೆಂಗಳೂರು.
- ಗಾಂಧಿ ಎಂ.ಕೆ. (ಮೂ.), ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಅನು.) (1995). ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ. ನವಜೀವನ ಪ್ರಕಾಶನ ಮಂದಿರ, ಅಹಮದಾಬಾದ್.
- ಹುಲಕುಂದ ಭೀಮಕವಿ. (1997). ಪವಿತ್ರ ಖಾದಿ. ಇಲ್ಲಿ. ಬಿಡುಗಡೆಯ ಹಾಡುಗಳು. ಸೂರ್ಯನಾಥ ಕಾಮತ. (ಸಂ.) ನ್ಯಾಷನಲ್ ಬುಕ್ ಟ್ರಸ್ಟ ಇಂಡಿಯಾ. ಬೆಂಗಳೂರು.